# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು.

## ಇಕ್ಸ್. ಸಂಖ್ಯೆ: 22/2019

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಎ. ವಾಸಿಮ್ | ಸಿಡಬ್ಲ್ಯೂ-1 |
| ತಂದೆಯ/ಗಂಡನ ಹೆಸರು | – | ಮಹಮದ್ ಅಸ್ಮತ್ | |
| ವಯಸ್ಸು | – | 51 ವರ್ಷ | ಪ್ರ.ವ.ಬೋ<br>ದಿನಾಂಕ:17.12.2024 |
| ಉದ್ಯೋಗ | – | ಪೌರಾಯುಕ್ತರು, ನಗರಸಭೆ,<br>ಹಿರಿಯೂರು. | |
| ವಾಸ | – | ಚಿತ್ರದುರ್ಗ | |

**ಮುಖ್ಯ ವಿಚಾರಣೆ: ನ್ಯಾಯಾಲಯದ ವತಿಯಿಂದ:–**

ನಾನು ಸೆಪ್ಟಂಬರ್–2024 ರಿಂದ ಇಲ್ಲಿಯವರೆಗೆ ಹಿರಿಯೂರು ನಗರಸಭೆಯಲ್ಲಿ ಪೌರಾಯುಕ್ತರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ:10.10.2023 ರಂದು ಈ ನ್ಯಾಯಾಲಯ ಅರ್ಜಿಯ ಸ್ವತ್ತಿನ ಸ್ವಾಧೀನವನ್ನು ಡಿಕ್ರಿಧಾರರ ವಶಕ್ಕೆ ನೀಡಲು ಆದೇಶಿಸಿದ್ದು ಅದರಂತೆ ನ್ಯಾಯಾಲಯದ ಸಿಬ್ಬಂದಿ ನಮ್ಮಗಳ ಜೊತೆ ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ ಸ್ಥಳದಲ್ಲಿರುವ ಪ್ರಸ್ತುತ ಚೆಕ್ಕುಬಂದಿಗೂ ಮತ್ತು ದಾಖಲೆಗಳಲ್ಲಿರುವ ಚೆಕ್ಕುಬಂದಿಗೂ ತಾಳೆಯಾಗುತ್ತಿಲ್ಲ ಎಂಬುದು ಗಮನಕ್ಕೆ ಬಂದು ನಾನು ನ್ಯಾಯಾಲಯದ ಸಿಬ್ಬಂದಿಯವರಿಗೆ ಒಂದು ಪತ್ರವನ್ನು ನೀಡಿರುತ್ತೇನೆ. ಚೆಕ್ಕುಬಂದಿ ತಾಳೆಯಾಗದ ಕಾರಣ ಡಿಕ್ರಿಧಾರರಿಗೆ ಅರ್ಜಿಯಲ್ಲಿ ಕಾಣಿಸಿರುವ ಸ್ವತ್ತಿನ ಸ್ವಾಧೀನವನ್ನು ಕೊಡಿಸಲಾಗಿರುವುದಿಲ್ಲ.

ನಂತರ ನ್ಯಾಯಾಲಯದಿಂದ ದಿನಾಂಕ:16.02.2024 ರಂದು ಪತ್ರವನ್ನು ಯಾವ ದಾಖಲೆಗಳ ಆಧಾರದ ಮೇಲೆ ನೀಡಲಾಗಿರುತ್ತದೆ ಎಂದು ನ್ಯಾಯಾಲಯದ ಸಮನ್ಸ್ ಬಂದ ಕಾರಣ ನಾನು ಈ ದಿನ ನ್ಯಾಯಾಲಯಕ್ಕೆ ಹಾಜರಾಗಿ ಕೆಲವೊಂದು ದಾಖಲೆಗಳನ್ನು ಹಾಜರುಪಡಿಸುತ್ತಿದ್ದು ಈ ಹಿಂದೆಯೂ ಸಹ ನ್ಯಾಯಾಲಯಕ್ಕೆ ದಿನಾಂಕ:16.10.2024 ರಂದು ದಾಖಲೆಗಳೊಂದಿಗೆ ವರದಿ ಸಲ್ಲಿಸಿರುತ್ತೇನೆ. ಸಾಕ್ಷಿ ನೋಡಿ

ಗುರುತಿಸಿದ ನ್ಯಾಯಾಲಯದಲ ಸಿಬ್ಬಂದಿಗೆ ನೀಡಿದ ವರದಿಯನ್ನು **ನಿ.ಸಿ-1** ಎಂದು ಗುರುತಿಸಲಾಯಿತು. ಸಾಕ್ಷಿ ನೋಡಿ ಗುರುತಿಸಿದ ದಿನಾಂಕಃ16.10.2024 ರ ವರದಿಯನ್ನು **ನಿ.ಸಿ-2** ಎಂದು ಗುರುತಿಸಲಾಯಿತು. ಏಳು ಭಾವಚಿತ್ರಗಳನ್ನು **ನಿ.ಸಿ-3 ರಿಂದ 9** ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು **ನಿ.ಸಿ-10** ಎಂದು ಗುರುತಿಸಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಎ.ಕೆ. ಕಾಲೋನಿಯಲ್ಲಿರುವ ಮನೆಗಳ ಮಾಹಿತಿಯ ವರದಿಯನ್ನು **ನಿ.ಸಿ-11** ಎಂದು ಗುರುತಿಸಲಾಯಿತು.

ಈ ಪ್ರಕರಣದಲ್ಲಿ ಸ್ವಾಧೀನಕ್ಕೆ ನೀಡಬೇಕು ಎಂದು ತೋರಿಸಿರುವ ನಿವೇಶನದಲ್ಲಿ ಒಂದು ಗುಡಿಸಲು ಮತ್ತು ಮನೆ ಇರುತ್ತದೆ. ಸದರಿ ಜಾಗಕ್ಕೆ ನಗರಸಭೆಯಿಂದ ಯಾವುದೇ ಖಾತೆ ಸಂಖ್ಯೆ ಮತ್ತು ಅಸೆಸ್‌ಮೆಂಟ್ ಸಂಖ್ಯೆ ನೀಡಿರುವುದಿಲ್ಲ. ಸದರಿ ಗುಡಿಸಲು ಮತ್ತು ಮನೆಯು ಸರ್ಕಾರಿ ಜಾಗದಲ್ಲಿ ಅನಧಿಕೃತವಾಗಿ ಇರುತ್ತದೆ.

**ಪಾಟೀ ಸವಾಲುಃ ಡಿಕ್ರಿಧಾರಕರ ಪರ ಶ್ರೀ ಎಸ್.ಕೆ.ಆರ್. ವಕೀಲರಿಂದಃ-**

ನಾನು ಹಿರಿಯೂರು ಪೌರಾಯುಕ್ತರಾಗಿ ಅಧಿಕಾರ ಸ್ವೀಕರಿಸುವ ಮೊದಲು ಹೊಳಲ್ಕೆರೆ ಪುರಸಭೆಯಲ್ಲಿ ಮುಖ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ನಾನು ಹಿರಿಯೂರಿಗೆ ಬಂದು ಮೂರು ತಿಂಗಳು ಆಗಿರುತ್ತವೆ. ನನಗೆ ಅರ್ಜಿಯಲ್ಲಿರುವ ಆಸ್ತಿಯ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ಹಿರಿಯೂರು ನಗರಸಭೆ ವ್ಯಾಪ್ತಿಗೆ ಬರುವ ಎಲ್ಲಾ ಕಂದಾಯ ರಹಿತ ಜಾಗಗಳಿಗೆ ಒಂದು ನಿವೇಶನ ಸಂಖ್ಯೆ ಮತ್ತು ಖಾತೆ ಸಂಖ್ಯೆ ಇರುತ್ತದೆ ಎಂದರೆ ಸರಿಯಲ್ಲ. ಅಧಿಕೃತ ಜಾಗಗಳಿಗೆ ಮಾತ್ರ ಖಾತೆ ಸಂಖ್ಯೆ ಮತ್ತು ನಿವೇಶನ ಸಂಖ್ಯೆ ಇರುತ್ತದೆ. ನಿವೇಶನ ಸಂಖ್ಯೆಃ28, ಖಾತಾ/ಅಸೆಸ್‌ಮೆಂಟ್ ಸಂಖ್ಯೆಃ170/1583/170 ಇದು ನಗರಸಭೆಯ ವಹಿಗಳಲ್ಲಿ ನಮೂದು ಇರುವುದೇ ಇಲ್ಲ.

**ಮುಂದುವರಿದ ಪಾಟೀ-ಸವಾಲಿಗೆ ಡಿಕ್ರಿಧಾರಕರ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಮುಕ್ತ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು